# ಕಣ್ಮನ ತಣಿಸುವ ತಂಜಾವೂರು

ಏಳು ವರ್ಷಗಳ ಹಿಂದೆ ತನ್ನ ಸಾವಿರ ವರ್ಷಗಳನ್ನು ಪೂರೈಸಿರುವ ಈ ದೇವಾಲಯ, ಇವತ್ತಿಗೂ ಧಾರ್ಮಿಕ ಪ್ರವಾಸಿಗರ ಅಚ್ಚುಮೆಚ್ಚಿನ ತಾಣವಾಗಿದೆ.

■ ಚಿತ್ರ –ಲೇಖನ: **ಡಾ.ಎನ್. ಸ್ವಾತಿ ಉಡುಪಿ**



ತಮಿಳುನಾಡಿನ ತಂಜಾವೂರಿನ ಬೃಹದೇಶ್ವರ ದೇವಾಲಯ. ಧಾರ್ಮಿಕ ಒಲವು ಮತ್ತು ಶಿಲ್ಪಕಲೆಯ ಕುರಿತ ಆಸ್ತಕಿ ಉಳ್ಳ ಪ್ರವಾಸಿಗರ ನೆಚ್ಚಿನ ತಾಣ.

ಕ್ರಿ.ಶ. 1010ರಲ್ಲಿ ಒಂದನೇ ರಾಜರಾಜ ಚೋಳನು ಈ ದೇವಾಲಯವನ್ನು ನಿರ್ಮಿಸಿದ. ತಮಿಳುನಾಡಿನಲ್ಲಿ ಇದು ದಕ್ಷಿಣ ಮೇರು ಎಂದೇ ಪ್ರಸಿದ್ಧಿ ಹೊಂದಿದೆ. ದ್ರಾವಿಡ ಶೈಲಿಯ ಈ ದೇಗುಲದ ವಾಸ್ತು ಶಿಲ್ಪಿ ಕುಂಜರ ಮಲ್ಲನ್ ರಾಜ ಪೆರುಂತಚನ್. ವಾಸ್ತು ಶಿಲ್ಪವನ್ನು ಪ್ರಸಿದ್ಧ ಗ್ರಂಥಗಳಾದ ವಾಸ್ತು ಶಾಸ್ತ್ರ ಮತ್ತು ಆಗಮ ಶಾಸ್ತ್ರವನ್ನು ಆಧರಿಸಿ ನಿರ್ಮಿಸಲಾಗಿದೆಯಂತೆ. ದೇಗುಲದ ನಿರ್ಮಾಣಕ್ಕೆ ಅಂಗುಲ ಪ್ರಮಾಣವನ್ನು ಬಳಸುತ್ತಿದ್ದರಂತೆ.

2010ರಲ್ಲಿ ಈ ದೇಗುಲವು ತನ್ನ ಸಾವಿರ ವರ್ಷಗಳ ಇತಿಹಾಸವನ್ನು ಪೂರೈಸಿದೆ. ಸಾವಿರ ವರ್ಷಗಳ ಇತಿಹಾಸವನ್ನು ಬಿಂಬಿಸಲು ಮುಂಬೈ, ಪುಣೆ, ತಮಿಳ್ನಾಡು, ಆಂಧ್ರಪ್ರದೇಶ, ಕರ್ನಾಟಕ, ಕೇರಳ, ಸಿಂಗಾಪುರ, ಮಲೇಷ್ಯಾ ಹೀಗೆ ದೇಶ ವಿದೇಶದ ಸುಮಾರು ಸಾವಿರ ಕಲಾವಿದರು ನೃತ್ಯ ಪ್ರದರ್ಶನ ನೀಡಿದ್ದರು. ಆ ಸಂದರ್ಭದಲ್ಲಿ ಈ ಪುಟ್ಟ ನಗರವನ್ನು ದಕ್ಷಿಣ ಭಾರತದ ಸಾಂಸ್ಕೃತಿಕ ರಾಜಧಾನಿಯನ್ನಾಗಿ ಮಾರ್ಪಡಿಸಿದ್ದರು.

ಇಡೀ ದೇಗುಲವನ್ನು ಸುಮಾರು ಐದು ವರ್ಷಗಳ (ಕ್ರಿ.ಶ.1004 ರಿಂದ 1009) ಅವಧಿಯಲ್ಲಿ ಸಂಪೂರ್ಣವಾಗಿ ಶಿಲಾಮಯವಾಗಿಯೇ ನಿರ್ಮಾಣ ಮಾಡಲಾಗಿತ್ತಂತೆ. ದೇಗುಲದ ಸುಮಾರು 16 ಅಡಿಗಳಷ್ಟು ಎತ್ತರದ ಪಂಚಾಂಗದಲ್ಲಿ ದೇವತೆಗಳ ಹಾಗೂ ನಟರಾಜನ ಗಣಗಳ ಕೆತ್ತನೆಗಳನ್ನು ಕಾಣಬಹುದು. ಗೋಪುರದ ಶಿಖರದಲ್ಲಿರುವ ಕಲಶವು 81.284 ಟನ್‌ಗಳಷ್ಟು ತೂಕವಿದ್ದು, 8 ಶಿಲೆಗಳ ಜೋಡಣೆಯಿಂದ ನಿರ್ಮಾಣಗೊಂಡಿದೆ. ಇಲ್ಲಿನ ಒಂದೊಂದು ಕಲಾಕುಸುರಿಯೂ ಶಿಲ್ಪಿಯ ಕಲಾನೈಪುಣ್ಯತೆಯನ್ನು ಸಾರುತ್ತದೆ. ಅಂದಿನ ಕಾಲದಲ್ಲಿ ಯಾವುದೇ ಆಧುನಿಕ ಯಂತ್ರಗಳ ನೆರವಿಲ್ಲದೇ ಈ ಶಿಖರದ ನಿರ್ಮಾಣವನ್ನು ಸುಮಾರು 6.5 ಕಿ.ಮೀ.ನಷ್ಟು ಎತ್ತರದವರೆಗೆ, ಮಣ್ಣಿನ ಇಳಿಜಾರನ್ನು ಕೃತಕವಾಗಿ ರಚಿಸುವ ಮೂಲಕ ಮಾಡಿರುವುದು ವೈಶಿಷ್ಟ್ಯವೇ ಸರಿ!

ಏಕಶಿಲೆಯಲ್ಲಿ ನಿರ್ಮಿಸಲಾಗಿರುವ ಕೃಷ್ಣ ವರ್ಣದ ಬೃಹತ್ ನಂದಿಯು ಎರಡು ಮೀಟರ್ ಎತ್ತರ, ಆರು ಮೀಟರ್ ಉದ್ದ, ಎರಡೂವರೆ ಮೀಟರ್ ಅಗಲ ಹಾಗೂ 20 ಟನ್ ಭಾರ ಉಳ್ಳದ್ದಾಗಿರುತ್ತದೆ. ಗರ್ಭಗುಡಿಯೊಳಗೆ ವಿರಾಜಮಾನನಾಗಿರುವ, 3.7ಮೀಟರ್ ಎತ್ತರದ ಲಿಂಗರೂಪಿ ಶಿವನಿಗೆ ರಜತ ಕವಚದ ಪಂಚ ಹೆಡೆಯ ಶೇಷನ ಆಶ್ರಯ. ಚಂಡಿಕೇಶ್ವರಿ, ವರಾಹಿ ಅಮ್ಮನ್, ಗಣಪತಿ, ಮಯೂರನ ಮೇಲೆ ಕುಳಿತಿರುವ ಸುಬ್ರಹ್ಮಣ್ಯನ ದರುಶನವೂ ನಮಗಾಗುತ್ತದೆ. ಈಶಾನ್ಯದಲ್ಲಿ 18 ಅಡಿ ಎತ್ತರದ ಬೃಹನ್ನಾಯಕಿ (ಪಾರ್ವತಿ) ಆಸೀನಳಾಗಿದ್ದಾಳೆ.

ಅಷ್ಟದಿಕ್ಪಾಲಕರಾದ ಇಂದ್ರ, ಅಗ್ನಿ, ಯಮ, ನಿರುತಿ, ವರುಣ, ವಾಯು, ಕುಬೇರ, ಈಶಾನರ ಮೂರ್ತಿಗಳು ಸ್ಥಾಪಿಸಲ್ಪಟ್ಟ ಬಹು ಅಪರೂಪದ ದೇವ ಸನ್ನಿಧಿ ಇದಾಗಿದೆ. ಗೋಡೆಗಳಲ್ಲಿ ತಮಿಳುನಾಡಿನ ಸಾಂಪ್ರದಾಯಿಕ ಕಲೆಯಾದ ಭರತನಾಟ್ಯದ 108 ಕರಣಗಳನ್ನು ಶಿಲೆಯಲ್ಲಿ

